852. **ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು):**– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಲ್ಲೂರು ಮೂಕಾಂಬಿಕ ಅಭಯರಣ್ಯ ವನ್ಯಜೀವಿ ವಿಭಾಗದ ಮೂಲಕ ನಕ್ಸಲ್ ಪೀಡಿತ ಪ್ರದೇಶಗಳಾದ ಹಳ್ಳಿಬೇರು, ಗೋಳಿಗುಡ್ಡೆ, ನೇಗಣಿ, ಮಾವಿರಕಾರು, ಖಾವುಡೆ, ಜಡ್ಕಲ್, ಮುದೂರು ಮುಂತಾದ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದಿರಲು ಕಾರಣವೇನು;

(ಆ) ಅಭಯಾರಣ್ಯದ ಮೂಲಕ ವಿದ್ಯುತ್ ಕಂಬಗಳನ್ನು ಹಾಕಲು ಅನುಮತಿ ನೀಡುವಂತೆ ವಲಯ ಅರಣ್ಯಾಧಿಕಾರಿಗಳು ಕೊಲ್ಲೂರು ವನ್ಯಜೀವಿ ವಿಭಾಗದವರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದರೂ ಸಹ ವಿಳಂಬವಾಗಲು ಕಾರಣವೇನು?

(ಇ) ನಕ್ಷಲ್ ಪೀಡಿತ ಪ್ರದೇಶಗಳಿಗೆ ವಿದ್ಯುತ್ ಹಾಯ್ದುಹೋಗಲು ಸರ್ಕಾರ ಯಾವಾಗ ಅನುಮತಿ ನೀಡಲಾಗುವುದು (ವಿವರ ನೀಡುವುದು)?

ಶ್ರೀ ಚನ್ನಿಗಪ್ಪ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):–

(ಅ) ರಾಷ್ಟ್ರೀಯ ಉದ್ಯಾನವನ/ವನ್ಯಜೀವಿ ಪ್ರದೇಶಗಳಲ್ಲಿ ಯಾವುದೇ ಅರಣ್ಯೇತರ ಚಟುವಟಿಕೆ ಕೈಗೊಳ್ಳಲು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಹಾಗೂ ಇದರ ಜೊತೆಗೆ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಪ್ರಕಾರ ರಾಷ್ಟ್ರೀಯ ವನ್ಯಜೀವಿ ಮಂಡಳಿಯವರಿಂದ ಅನುಮೋದನೆ ಪಡೆಯಲೇ ಬೇಕಾಗುತ್ತದೆ. ಸಂಪರ್ಕ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

(ಆ) ಈ ಸಂಬಂಧ ರಾಷ್ಟ್ರೀಯ ವನ್ಯಜೀವಿ ಮಂಡಳಿ (NBWL) ಯ ಅನುಮತಿ ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಪ್ರಕಾರ ಅನುಮೋದನೆ ಬೇಕಾಗಿರುವುದರಿಂದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಇವರಿಂದ ವಿವರವಾದ ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ.

(ಇ) ರಾಷ್ಟ್ರೀಯ ವನ್ಯಜೀವಿ ಮಂಡಳಿ (NBWL) ಸಭೆಯಲ್ಲಿ ಚರ್ಚಿಸಿ ಕೇಂದ್ರ ಸರ್ಕಾರದಿಂದ ಅರಣ್ಯ ಸಂರಕ್ಷಣಾ ಕಾಯ್ದೆ 1980ರಡಿಯಲ್ಲಿ ಅನುಮತಿ ದೊರೆತ ನಂತರ ವಿದ್ಯುತ್ ಸಂಪರ್ಕ ಕಲ್ಪಿಸಲು ಅನುಮತಿಸಲಾಗುವುದು.

780. **ಶ್ರೀ ವಿಶ್ವನಾಥ ಹೆಚ್. ಎಂ. (ಸಕಲೇಶಪುರ):**–ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) 2005–06 ಮತ್ತು 2006–07ನೇ ಸಾಲಿನಲ್ಲಿ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಆನೆ ತುಳಿತದಿಂದ ಉಂಟಾದ ಬೆಳೆ ನಷ್ಟದ ಪ್ರಕರಣಗಳೆಷ್ಟು;

(ಆ) ಈ ಬೆಳೆ ನಷ್ಟದ ಪರಿಹಾರಕ್ಕಾಗಿ ವರ್ಷವಾರು ಬಿಡುಗಡೆಯಾದಂತಹ ಹಣವೆಷ್ಟು;

(ಇ) ಈ ವರೆಗೆ ಎಷ್ಟು ಪ್ರಕರಣಗಳಿಗೆ ಪರಿಹಾರ ವಿತರಣೆಯಾಗಿದೆ; (ವಿವರ ನೀಡುವುದು)

(ಈ) ಎಷ್ಟು ಪ್ರಕಣಗಳು ಬಾಕಿ ಉಳಿದಿವೆ, ಪರಿಹಾರ ನೀಡಲು ಬಾಕಿ ಉಳಿದಿದ್ದರೆ ಕಾರಣಗಳೇನು;

(ಉ) ವೈಜ್ಞಾನಿಕವಾಗಿ ಪರಿಹಾರದ ಹಣವನ್ನು ಕಾಲಮಿತಿಯೊಳಗೆ ವಿತರಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಚನ್ನಿಗಪ್ಪ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):–

(ಅ) 2005–06 ಮತ್ತು 2006–07ನೇ ಸಾಲಿನಲ್ಲಿ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಕಾಡಾನೆ ದಾಳಿಯಿಂದಾಗಿರುವ ಬೆಳೆ ನಷ್ಟದ ವಿವರ ಈ ಕೆಳಗಿನಂತಿದೆ.

2005–06ನೇ ಸಾಲು

ಕ್ರ.ಸಂ.	ತಾಲ್ಲೂಕು	ಬೆಳೆ ಹಾನಿ ಪ್ರಕರಣ	ವಿತರಿಸಿರುವ ಪರಿಹಾರ (ರೂ.)
1	ಆಲೂರು	780	10,54,228
2	ಸಕಲೇಶಪುರ	499	9,53,535
	ಒಟ್ಟು	1,279	20,07,763

2006–07ನೇ ಸಾಲು

ಕ್ರ.ಸಂ.	ತಾಲ್ಲೂಕು	ಬೆಳೆ ಹಾನಿ ಪ್ರಕರಣ	ವಿತರಿಸಿರುವ ಪರಿಹಾರ (ರೂ.)
1	ಆಲೂರು	839	7,64,512
2	ಸಕಲೇಶಪುರ	136	1,98,000
	ಒಟ್ಟು	975	9,62,512

ಕ್ರ.ಸಂ.	ವರ್ಷ	ಪ್ರಕರಣ	ವಿತರಿಸಿರುವ ಪರಿಹಾರ (ರೂ.)
1	2005–06	1279	20,07,763.00
2	2006–07	975	9,62,512.00

2007–08ನೇ ಸಾಲಿನಲ್ಲಿ ಜೂನ್ 2007ರ ಅಂತ್ಯದವರೆಗೆ ವಿತರಿಸಿರುವ ಪರಿಹಾರ

ಕ್ರ.ಸಂ.	ತಾಲ್ಲೂಕು	ಬೆಳೆ ಹಾನಿ ಪ್ರಕರಣ	ವಿತರಿಸಿರುವ ಪರಿಹಾರ (ರೂ.)
1	ಆಲೂರು	165	1,69,269
2	ಸಕಲೇಶಪುರ	408	9,66,874
	ಒಟ್ಟು	573	11,36,143

ಬಾಕಿಯಿರುವ ಪ್ರಕರಣಗಳು

ಕ್ರ.ಸಂ.	ವಲಯ/ ತಾಲ್ಲೂಕು	ಬೆಳೆ ಹಾನಿ ಪ್ರಕರಣ	ವಿತರಿಸಿರುವ ಪರಿಹಾರ (ರೂ.)
1	ಆಲೂರು	175	1,90,933
2	ಸಕಲೇಶಪುರ	339	7,75,733
	ಒಟ್ಟು	514	9,66,666

ಪ್ರಸ್ತುತ ಲಭ್ಯವಿರುವ ಅನುದಾನದಲ್ಲಿ ಪರಿಹಾರ ವಿತರಿಸಿದ್ದು, ಬಾಕಿ ಇರುವ ಪ್ರಕರಣಗಳಿಗೆ ಹೆಚ್ಚಿನ ಅನುದಾನ ಲಭ್ಯವಾದ ಕೂಡಲೇ ವಿತರಿಸಲಾಗುವುದು.

(ಊ) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ವನ್ಯಜೀವಿ), ಬೆಂಗಳೂರು ರವರ ಪತ್ರ ಸಂಖ್ಯೆ: ಸಿ2/ಕಾಮ್/ಸಿಆರ್–368/199–2000, ದಿನಾಂಕ 11–06–2002 ಹಾಗೂ 27–02–2004ರ ಸುತ್ತೋಲೆಗಳಲ್ಲಿ ನಿಗದಿಪಡಿಸಿರುವ ಬೆಳೆಗಳ ದರಗಳಿಗನುಗುಣವಾಗಿ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಅಪಜೀ 259 ಎಫ್‌ಡಬ್ಲ್ಯೂಎಲ್

2006, ದಿನಾಂಕ 17–01–2007ರ ಪ್ರಕಾರ ಪರಿಹಾರವನ್ನು ಮಂಜೂರು ಮಾಡಿ ಕೂಡಲೇ ಸಂಬಂಧಿಸಿದ ಖಜಾನೆಗಳಿಂದ ಸಂತ್ರಸ್ತರ ಹೆಸರಿನಲ್ಲಿ ಚೆಕ್ ಮೂಲಕ ಪರಿಹಾರ ವಿತರಿಸಲಾಗುತ್ತಿದೆ.

841. **ಶ್ರೀ ಶ್ರೀರಾಮರೆಡ್ಡಿ ಜಿ. ವಿ. (ಬಾಗೇಪಲ್ಲಿ):–** ಮಾನ್ಯ ಉಪಮುಖ್ಯಮಂತ್ರಿಗಳು ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಾರಾಯಿ ಮಾರಾಟ ನಿಷೇಧದಿಂದಾಗಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಉಂಟಾಗಿರುವ ನಷ್ಟವೆಷ್ಟು;

(ಆ) ಈ ನಷ್ಟಕ್ಕೆ ಪರ್ಯಾಯವಾಗಿ ಆದಾಯ ಕ್ರೋಢಿಕರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಎಸ್. ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು):–

(ಅ) ವಾರ್ಷಿಕ ಸುಮಾರು 1,900 ಕೋಟಿ ರೂ.ಗಳು

(ಆ) ಸಾರಾಯಿ ನಿಷೇಧದಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಕ್ರೋಢಿಕರಿಸಲು ಯಾವುದೇ ಪರ್ಯಾಯ ಕ್ರಮಗಳನ್ನು ಸರ್ಕಾರ ಯೋಜಿಸಿರುವುದಿಲ್ಲ. ಆದರೆ, ಈ ನಷ್ಟವನ್ನು ಸ್ವಲ್ಪ ಮಟ್ಟಿಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಮೂಲಕ ಹಾಗೂ ಬೇರೆ ರಾಜ್ಯಸ್ವಗಳಿಂದ ಸಂಪನ್ಮೂಲಗಳನ್ನು ಕ್ರೋಢಿಕರಿಸುವ ಮೂಲಕ ಈ ನಷ್ಟವನ್ನು ಸರ್ಕಾರವು ಭರಿಸುವುದು.

655. **ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ):–** ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಾರಾಯಿ ನಿಷೇಧದಿಂದ ಅಬಕಾರಿ ಇಲಾಖೆಗೆ ಉಂಟಾಗಿರುವ ಆದಾಯದ ಕೊರತೆ ಎಷ್ಟು;

(ಆ) ಈ ಕೊರತೆಯನ್ನು ಐ.ಎಂ.ಎಫ್.ಎಲ್. ಗಳಿಂದ ತುಂಬಿಕೊಳ್ಳಲು ಸರ್ಕಾರ ಉದ್ದೇಶಿಸಿರುವುದು ನಿಜವೇ;

(ಇ) ಹಾಗಿದ್ದಲ್ಲಿ, ಐ.ಎಂ.ಎಫ್.ಎಲ್.ಗಳಿಗೆ ಹೆಚ್ಚುವರಿಯಾಗಿರುವ ಶೇಕಡಾವಾರು ದರ ಎಷ್ಟು;

(ಈ) ದರ ಹೆಚ್ಚಳದಿಂದಾಗಿ ಐ.ಎಂ.ಎಫ್.ಎಲ್.ಗಳು ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?